# ಅಯ್ಯರ್ ಪಡೆಗಿಂದು ಅಫ್ಘಾನಿಸ್ತಾನ ಸವಾಲು

**ನಿಶಿನ್, ಜಪಾನ್:** ಗುಂಪು ಹಂತಗಳಿಂದ ರೋಚಕ ರೀತಿಯಲ್ಲಿ ಅಗ್ರ ನಾಲ್ಕು ತಂಡಗಳ ಪಟ್ಟಿಗೆ ಪ್ರವೇಶ ಪಡೆದಿರುವ ಅಫ್ಘಾನಿಸ್ತಾನ ತಂಡವು 2026ರ ಏಷ್ಯನ್ ಗೇಮ್ಸ್‌ನ ಕ್ವಾರ್ಟರ್ ಫೈನಲ್ 2ರಲ್ಲಿ ಭಾರತವನ್ನು ಎದುರಿಸಲಿದೆ. ಈ ಪಂದ್ಯವು ಸೋಮವಾರ ನಿಶಿನ್‌ನ ಕೊರೋಗಿ ಸ್ಪೋರ್ಟ್ಸ್ ಪಾರ್ಕ್ ನಲ್ಲಿ ನಡೆಯಲಿದೆ. ಐಸಿಸಿ ಟಿ20ಐ ಶ್ರೇಯಾಂಕದಲ್ಲಿನ ಉತ್ತಮ ಸ್ಥಾನದ ಕಾರಣದಿಂದಾಗಿ, ಭಾರತವು ಈ ಟೂರ್ನಿಯ ಕ್ವಾರ್ಟರ್ ಫೈನಲ್‌ಗೆ ನೇರ ಪ್ರವೇಶ ಪಡೆದಿದೆ. ಶ್ರೇಯಸ್ ಅಯ್ಯರ್ ನೇತೃತ್ವದ ತಂಡವು ತಮ್ಮ ಹಿಂದಿನ ಪಂದ್ಯದಲ್ಲಿ ಜಪಾನ್ ವಿರುದ್ಧ ಅಲ್ಪ ಅಂತರದ ಜಯ ಸಾಧಿಸಿತ್ತು. ಇದೀಗ ಅಫ್ಘಾನಿಸ್ತಾನದ ವಿರುದ್ಧದ ಪಂದ್ಯದಲ್ಲಿ ತಂಡವು ಉತ್ತಮ ಪ್ರದರ್ಶನ ನೀಡಲು ಎದುರು ನೋಡುತ್ತಿದೆ. ಎರಡು ವಾರಗಳ ಹಿಂದಷ್ಟೇ ದೆಹಲಿಯಲ್ಲಿ ನಡೆದ ಸರಣಿಯಲ್ಲಿ ಭಾರತದ ಎದುರು 3-0 ಅಂತರದಲ್ಲಿ ಹೀನಾಯ ಸೋಲನ್ನು ಕಂಡ ಅಫ್ಘಾನಿಸ್ತಾನ ಅದನ್ನು ಮರೆತು ಮುನ್ನಡೆಯಲು ಪ್ರಯತ್ನಿಸಲಿದೆ. ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಭಾರತೀಯ ತಂಡದ ವಿರುದ್ಧ ಗೆಲುವು ಕಾಣದ ಅಫ್ಘಾನ್ ತಂಡವು, ಮರುಸಂಘಟಿತಗೊಂಡು ಸೆಮಿಫೈನಲ್ ಹಂತಕ್ಕೇರುವ ಗುರಿಯನ್ನು ಹೊಂದಿದೆ. ನಿಶಿನ್‌ನ ಕೊರೋಗಿ ಸ್ಪೋರ್ಟ್ಸ್ ಪಾರ್ಕ್‌ನಲ್ಲಿ ಮೋಡ ಕವಿದ ವಾತಾವರಣವಿದ್ದು, ಮಳೆಯಿಂದ ಪಂದ್ಯ ರದ್ದಾದರೆ ಭಾರತ ನೇರವಾಗಿ ಸೆಮಿಫೈನಲ್‌ಗೆ ಪ್ರವೇಶ ಪಡೆಯಲಿದೆ.

# ಚೆಸ್ ಒಲಿಂಪಿಯಾಡ್: ಭಾರತಕ್ಕೆ ಬೆಳ್ಳಿ ಭಾಗ್ಯ

**ಸಮರಖಂಡ್:** ಭಾರತ ತಂಡ 11ನೇ (ಹಾಗೂ ಅಂತಿಮ) ಸುತ್ತಿನಲ್ಲಿ ಹಂಗೇರಿ ಜೊತೆ 2-2 ಡ್ರಾ ಮಾಡಿಕೊಂಡು 46ನೇ ಚೆಸ್ ಒಲಿಂಪಿಯಾಡ್‌ನ ಓಪನ್ ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದೆ. ಭಾನುವಾರ ಮುಕ್ತಾಯಗೊಂಡ ಈ ಒಲಿಂಪಿಯಾಡ್‌ನಲ್ಲಿ ಭಾರತ ಮಹಿಳೆಯರ ತಂಡ ಕೊನೆಯ ಸುತ್ತಿನಲ್ಲಿ ಜಾರ್ಜಿಯಾ ಜೊತೆ 2-2 ಡ್ರಾ ಮಾಡಿಕೊಂಡು ಕಂಚಿನ ಪದಕ ಜಯಿಸಿತು. 11 ಸುತ್ತುಗಳಲ್ಲಿ ಸಂಭವನೀಯ 22ರಲ್ಲಿ 20 ಪಾಯಿಂಟ್ ಕಲೆಹಾಕಿದ ಆತಿಥೇಯ ಉಜ್ಬೇಕಿಸ್ತಾನ ತಂಡ ಓಪನ್ ವಿಭಾಗದಲ್ಲಿ ಚಾಂಪಿಯನ್ ಆಯಿತು. ಈ ತಂಡ ಜರ್ಮನಿಗೆ ಮಾತ್ರ ಸೋತಿತ್ತು. ಎರಡು ವರ್ಷಗಳ ಹಿಂದೆ ಬುಡಾಪೆಸ್ಟ್ ಒಲಿಂಪಿಯಾಡ್‌ನಲ್ಲಿ ಚಾಂಪಿಯನ್ ಆಗಿದ್ದ ಭಾರತ ಮತ್ತು ಜರ್ಮನಿ ತಲಾ 18 ಪಾಯಿಂಟ್ಸ್ ಕಲೆಹಾಕಿದವು. ಆದರೆ ಉತ್ತಮ ಟೈಬ್ರೇಕರ್ ಆಧಾರದಲ್ಲಿ ಭಾರತ ಎರಡನೇ ಸ್ಥಾನ ಪಡೆಯಿತು. ಜರ್ಮನಿ ಕೊನೆಯ ಸುತ್ತಿನಲ್ಲಿ ಹಾಲೆಂಡ್ ಜೊತೆ ಡ್ರಾ ಮಾಡಿಕೊಂಡಿತು. ಕಂಚಿನ ಪದಕ ಗಳಿಸಿತು.

ವಿರಾಮ
ಪ್ರತಿ ಭಾನುವಾರ

# ಅಥ್ಲೆಟಿಕ್ಸ್‌ನಲ್ಲಿ ಪದಕ ಬೇಟೆ ಎಂಟನೇ ದಿನ 4 ಬೆಳ್ಳಿ, 3 ಕಂಚು

## ಲಾಂಗ್ ಜಂಪ್, ಹೈಜಂಪ್, ಸ್ಕ್ವಾಷ್‌ನಲ್ಲಿ ಬೆಳ್ಳಿ ಪದಕದ ಸಂಭ್ರಮ




**ಐಚಿ-ನಗೋಯಾ:** ಜಪಾನ್‌ನಲ್ಲಿ ನಡೆಯುತ್ತಿರುವ 20ನೇ ಏಷ್ಯಾಡ್ ಕ್ರೀಡಾಕೂಟದ ಎಂಟನೇ ದಿನವಾದ ಭಾನುವಾರ ಭಾರತೀಯ ಅಥ್ಲೀಟ್‌ಗಳು ಉತ್ತಮ ಪ್ರದರ್ಶನ ಮುಂದುವರಿಸಿದ್ದಾರೆ. ಅಥ್ಲೆಟಿಕ್ಸ್, ಸ್ಕ್ವಾಷ್ ಮತ್ತು ಬಿಲ್ಗಾರಿಕೆಯಲ್ಲಿ ಭಾರತದ ಕ್ರೀಡಾಪಟುಗಳು ಗಮನಾರ್ಹ ಸಾಧನೆ ಮಾಡಿದ್ದಾರೆ.

ಭಾನುವಾರದ ಸ್ಪರ್ಧೆಗಳು ಮುಗಿಯುವ ವೇಳೆಗೆ ಭಾರತದ ಒಟ್ಟು ಪದಕಗಳ ಸಂಖ್ಯೆ 37ಕ್ಕೆ ಏರಿದೆ. ಇದರಲ್ಲಿ 4 ಸ್ವರ್ಣ, 16 ಬೆಳ್ಳಿ ಹಾಗೂ 17 ಕಂಚಿನ ಪದಕಗಳು ಸೇರಿವೆ. ಭಾರತವು ಪದಕಗಳ ಪಟ್ಟಿಯಲ್ಲಿ ಸದ್ಯ 12ನೇ ಸ್ಥಾನದಲ್ಲಿದೆ.

**ಲಾಂಗ್ ಜಂಪ್ (ಉದ್ದ ಜಿಗಿತ):** ಭಾರತದ ಆನ್ಸಿ ಸೋಜನ್ ಏಷ್ಯನ್ ಗೇಮ್ಸ್ ಮಹಿಳೆಯರ ಲಾಂಗ್ ಜಂಪ್ ಫೈನಲ್‌ನಲ್ಲಿ ಬೆಳ್ಳಿ ಪದಕ ಗೆದ್ದಿದ್ದಾರೆ. ಆನ್ಸಿ ಅತ್ಯುತ್ತಮ ಪ್ರದರ್ಶನ ನೀಡಿ ಕೇವಲ 2 ಸೆಂಟಿಮೀಟರ್‌ಗಳಿಂದ ಚಿನ್ನದ ಪದಕ ಕಳೆದುಕೊಂಡು ಬೆಳ್ಳಿ ಪದಕ ಜಯಿಸಿದರು. ಅವರು 6.53 ಮೀಟರ್ ಜಿಗಿದು ಮುಂಚೂಣಿಯಲ್ಲಿದ್ದರೂ ಚೀನಾದ ಯಿಂಗ್‌ಯಿಂಗ್ ಹುವಾಂಗ್ (6.55 ಮೀ) ಕೊನೆಯ ಪ್ರಯತ್ನದಲ್ಲಿ ಚಿನ್ನ ಪಡೆದರು. ಚೀನಾದ ಟಾನ್ ಮೆಂಗ್‌ಯಿ 6.46 ಮೀಟರ್‌ಗಳೊಂದಿಗೆ ಕಂಚಿನ ಪದಕ ಪಡೆದರೆ, ಭಾರತದ ಶೈಲಿ ಸಿಂಗ್ 6.42 ಮೀಟರ್ ಜಿಗಿದು ನಾಲ್ಕನೇ ಸ್ಥಾನ ಪಡೆದರು.

**ಹೈ ಜಂಪ್:** ಇದಕ್ಕೂ ಮುನ್ನ ನಡೆದ ಪುರುಷರ ಹೈ ಜಂಪ್‌ನಲ್ಲಿ ಸರ್ವೇಶ್ ಕುಶಾರೆ 2.25 ಮೀಟರ್ ಎತ್ತರ ಜಿಗಿದು ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು.

**ಓಟದ ಸ್ಪರ್ಧೆ, ಸ್ಟೀಪಲ್‌ಚೇಸ್:** ಮಹಿಳೆಯರ 200 ಮೀಟರ್ ಓಟದ ಸ್ಪರ್ಧೆಯಲ್ಲಿ, ಭಾರತದ ಹರಿತಾ ಭದ್ರಾ ಅವರು ಕಂಚಿನ ಪದಕ ಗೆದ್ದರು. ಫೈನಲ್‌ನಲ್ಲಿ ಅವರು ಜಪಾನ್‌ನ ಅಬಿಗೈರುಪುಕಾ ಇಡೊ ಅವರಿಗಿಂತ ಕೇವಲ 0.01 ಸೆಕೆಂಡುಗಳ ಅಂತರದಲ್ಲಿ ಮೂರನೇ ಸ್ಥಾನಿಯಾದರು. ಹರಿತಾ 23.20 ಸೆಕೆಂಡುಗಳಲ್ಲಿ ಓಟ ಪೂರೈಸಿ ಮೂರನೇ ಸ್ಥಾನ ಪಡೆದರೆ, ಇಂಡೋನೇಷ್ಯಾದ ಶಾಂತಿ ಪೆರೇರಾ 22.78 ಸೆಕೆಂಡುಗಳಲ್ಲಿ ಓಡಿ ಚಿನ್ನದ ಪದಕ ಗೆದ್ದರು. ಚೀನಾದ 100 ಮೀಟರ್ ಚಾಂಪಿಯನ್ ಯುಜಿ ಚೆನ್ 22.93 ಸೆಕೆಂಡುಗಳ ಸಮಯದೊಂದಿಗೆ ಬೆಳ್ಳಿ ಪದಕ ಪಡೆದರು.

ಮಹಿಳೆಯರ 3000 ಮೀಟರ್ ಸ್ಟೀಪಲ್‌ಚೇಸ್‌ನಲ್ಲಿ ಅಥ್ಲೀಟ್ ಪರುಲ್ ಚೌಧರಿ ತಮ್ಮ ವೈಯಕ್ತಿಕ ಶ್ರೇಷ್ಠ ಸಾಧನೆ (9:08.67) ಮೆರೆದು ಕಂಚಿನ ಪದಕ ಗೆದ್ದರೆ ಪುರುಷರ ಹೆಪ್ಟಾಥ್ಲಾನ್/ಡೆಕಾಥ್ಲಾನ್ ವಿಭಾಗದಲ್ಲಿ ತೇಜಸ್ವಿನ್ ಶಂಕರ್ ಕಂಚಿನ ಪದಕ ಜಯಿಸಿ ದರು.

**ಬಾಕ್ಸಿಂಗ್:** ಭಾರತದ ಬಾಕ್ಸಿಂಗ್ ಅಭಿಯಾನಕ್ಕೆ ಭಾನುವಾರ ದೊಡ್ಡ ಯಶಸ್ಸು ಲಭಿಸಿದೆ. ಅಂಕುಶ್ ಪಂಘಾಲ್, ನರೇಂದರ್ ಬರ್ವಾಲ್ ಸೆಮಿಫೈನಲ್‌ಗೆ ಭರ್ಜರಿಯಾಗಿ ಪ್ರವೇಶಿಸುವ ಮೂಲಕ ದೇಶಕ್ಕೆ ಎರಡು ಪದಕಗಳನ್ನು ಖಚಿತಪಡಿಸಿದ್ದಾರೆ. ಪುರುಷರ 80 ಕೆಜಿ ವಿಭಾಗದ ಕ್ವಾರ್ಟರ್‌ಫೈನಲ್‌ನಲ್ಲಿ ತಜಕಿಸ್ತಾನದ ನೆಕ್ರುಜ್ ಸಲಿಮೊವ್ ವಿರುದ್ಧ 5-0 ಅಂತರದ ಅಧಿಕಾರಯುತ ಜಯ ಸಾಧಿಸುವ ಮೂಲಕ ಅಂಕುಶ್ ಪದಕ ಖಚಿತಪಡಿಸಿಕೊಂಡ ಮೊದಲ ಭಾರತೀಯ ಬಾಕ್ಸರ್ ಎನಿಸಿಕೊಂಡರು.

ಮಹಿಳೆಯರ 65 ಕೆಜಿ ವಿಭಾಗದ ಕ್ವಾರ್ಟರ್‌ಫೈನಲ್‌ನಲ್ಲಿ ಉಜ್ಬೇಕಿಸ್ತಾನದ ವಿಶ್ವ ಚಾಂಪಿಯನ್‌ಶಿಪ್ ಬೆಳ್ಳಿ ಪದಕ ವಿಜೇತೆ ನವ್ಬಖೋರ್ ಖಮಿಡೋವಾ ವಿರುದ್ಧ ಪರ್ವೀನ್ 5-0 ಅಂತರದ ಪ್ರಭಾವಶಾಲಿ ಜಯವನ್ನು ದಾಖಲಿಸಿದರು.

**ಬಿಲ್ಗಾರಿಕೆಯಲ್ಲಿ ಮಿಂಚು:** ಭಾರತೀಯ ಧನುರ್ವಿದ್ಯಾಪಟುಗಳು ಭಾನುವಾರ ಅತ್ಯಂತ ಸ್ಮರಣೀಯ ಪ್ರದರ್ಶನ ನೀಡಿದರು. ರಿಕರ್ವ್ ಪುರುಷರ ಮತ್ತು ಮಹಿಳೆಯರ ತಂಡಗಳು, ಹಾಗೆಯೇ ರಿಕರ್ವ್ ಮತ್ತು ಕಂಪೌಂಡ್ ಮಿಕ್ಸೆಡ್ (ಮಿಶ್ರ) ತಂಡಗಳು ಸೇರಿದಂತೆ ಕಣಕ್ಕಿಳಿದ ಎಲ್ಲ ಐದು ತಂಡಗಳೂ ಸೆಮಿಫೈನಲ್‌ಗೆ ಪ್ರವೇಶ ಪಡೆದು ಪದಕದಾಸೆಯನ್ನು ಜೀವಂತವಾಗಿರಿಸಿಕೊಂಡಿವೆ.

**ಹಾಕಿ:** ಮಹಿಳೆಯರ ಪೂಲ್ ಬಿ ವಿಭಾಗದ ಪಂದ್ಯದಲ್ಲಿ ಭಾರತ ತಂಡವು ಸಿಂಗಾಪುರ ವಿರುದ್ಧ 7-0 ಗೋಲುಗಳ ಭರ್ಜರಿ ಗೆಲುವು ದಾಖಲಿಸಿ ಸೆಮಿಫೈನಲ್ ಹಾದಿಯನ್ನು ಸುಲಭಗೊಳಿಸಿಕೊಂಡಿದೆ.

**ಬ್ಯಾಡ್ಮಿಂಟನ್:** ಮಹಿಳೆಯರ ಸಿಂಗಲ್ಸ್ ಕ್ವಾರ್ಟರ್ ಫೈನಲ್‌ನಲ್ಲಿ ಸ್ಟಾರ್ ಆಟಗಾರ್ತಿ ಪಿ.ವಿ. ಸಿಂಧು ಮತ್ತು ಉನ್ನತಿ ಹೂಡಾ ಅವರು ತಮ್ಮ ಎದುರಾಳಿಗಳ ಎದುರು ಸೋತು ನಿರ್ಗಮಿಸುವುದರೊಂದಿಗೆ, ಬ್ಯಾಡ್ಮಿಂಟನ್‌ನಲ್ಲಿ ಭಾರತದ ವೈಯಕ್ತಿಕ ಅಭಿಯಾನವು ಕೊನೆಗೊಂಡಿದೆ. ಪಿ.ವಿ. ಸಿಂಧು ಕೂಡ ತಮ್ಮ ಪರಿಚಿತ ಪ್ರತಿಸ್ಪರ್ಧಿ ಚೆನ್ ಯುಫೈಗೆ ಪ್ರಬಲ ಪೈಪೋಟಿ ನೀಡಿದರೂ ಚೆನ್ ಯುಫೈ ಅವರು 11-21, 21-18, 21-10ರ ಅಂತರದಲ್ಲಿ ಗೆಲುವು ಸಾಧಿಸುವ ಮೂಲಕ ಸೆಮಿಫೈನಲ್‌ಗೆ ಲಗ್ಗೆ ಇಟ್ಟರು.

## ಸ್ಕ್ವಾಷ್‌ನಲ್ಲಿ ಕೈತಪ್ಪಿದ ಅವಳಿ ಚಿನ್ನ



**ಬೆಳ್ಳಿಗೆ ತೃಪ್ತಿಪಟ್ಟ ಅನಾಹತ್, ಅಭಯ್ ಸಿಂಗ್**

ಜೂನಿಯರ್ ವಿಶ್ವ ಚಾಂಪಿಯನ್ ಅನಾಹತ್ ಸಿಂಗ್ ಮತ್ತು ಅನುಭವಿ ಆಟಗಾರ ಅಭಯ್ ಸಿಂಗ್ ಏಷ್ಯಾಡ್ ಸ್ಕ್ವಾಷ್ ಸ್ಪರ್ಧೆಯಲ್ಲಿ ಕ್ರಮವಾಗಿ ಮಹಿಳೆಯರ ಮತ್ತು ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಬೆಳ್ಳಿ ಪದಕ ಜಯಿಸಿದ್ದಾರೆ. ಭಾನುವಾರ ನಡೆದ ಆರಂಭಿಕ ಪುರುಷರ ಸಿಂಗಲ್ಸ್ ಫೈನಲ್ ಪಂದ್ಯದಲ್ಲಿ 28 ವರ್ಷದ ಅಭಯ್ ಸಿಂಗ್ ಅವರು ಮಲೇಷ್ಯಾದ ಎನ್‌ಜಿ ಈನ್ ಯೌ ವಿರುದ್ಧ 3-0 ಅಂತರದ ಸೋಲು ಕಂಡರೆ, ಆ ಬಳಿಕ ನಡೆದ ಮಹಿಳಾ ಸಿಂಗಲ್ಸ್‌ನಲ್ಲಿ ಅನಾಹತ್ ವಿಶ್ವ ನಂ. 5 ಮಲೇಷ್ಯಾದ ಸಿವಸಂಗರಿ ಸುಬ್ರಹ್ಮಣ್ಯಂ ವಿರುದ್ಧ 3-0 ನೇರ ಗೇಮ್ ಅಂತರದಿಂದ ಸೋಲು ಕಂಡರು. ನಗೋಯಾ ಕಿಂಜೊ ಫುಟೊ ಅರೆನಾದಲ್ಲಿ ನಡೆದ ಮಹಿಳೆಯರ ಸಿಂಗಲ್ಸ್ ಫೈನಲ್‌ನಲ್ಲಿ ಶಿವಸಂಗರಿ ಸುಬ್ರಮಣ್ಯಂ 18 ವರ್ಷದ ಅನಾಹತ್ ಅವರನ್ನು 11-4, 11-4, 11-7 ರಿಂದ ಸೋಲಿಸಿದರೆ, ವಿಶ್ವದ ನಂ. 17 ಎನ್‌ಜಿ ಈನ್ ಯೌ ಅವರು ವಿಶ್ವದ ನಂ. 26 ನೇ ಶ್ರೇಯಾಂಕದ ಅಭಯ್ ಅವರನ್ನು 11-5, 11-5, 11-5 ಅಂತರದಿಂದ ಸೋಲಿಸಿದರು.

ಭಾರತಕ್ಕೆ ಭರ್ಜರಿ ಜಯ | ಕೊಹ್ಲಿ 15 ಸಾವಿರ ರನ್‌ಗಳ ಸರದಾರ

# ಕೊಹ್ಲಿ, ಗಿಲ್ ಶತಕದಾಟ ವೆಸ್ಟ್ ಇಂಡೀಸ್ ತರಗೆಲೆ




**ತಿರುವನಂತಪುರಂ:** ನಾಯಕ ಶುಭಮನ್ ಗಿಲ್ (110) ಮತ್ತು ವಿರಾಟ್ ಕೊಹ್ಲಿಯ(139★) ಭರ್ಜರಿ ಶತಕ ಮತ್ತು ಕುಲ್‌ದೀಪ್ ಯಾದವ್ ಅವರ ಸ್ಪಿನ್ ಕೈಚಳಕದ (40ಕ್ಕೆ 4) ನೆರವಿನಿಂದ ವೆಸ್ಟ್ ಇಂಡೀಸ್ ವಿರುದ್ಧದ ಮೊದಲ ಏಕದಿನ ಪಂದ್ಯದಲ್ಲಿ ಭಾರತ 8 ವಿಕೆಟ್ ಅಂತರದ ನಿರಾಯಾಸ ಗೆಲುವು ಸಾಧಿಸಿದೆ. ಈ ಮೂಲಕ ಮೂರು ಪಂದ್ಯಗಳ ಸರಣಿಯಲ್ಲಿ 1-0 ಮುನ್ನಡೆ ಕಾಯ್ದುಕೊಂಡಿದೆ.

ಭಾನುವಾರ ಇಲ್ಲಿನ ಗ್ರೀನ್‌ಫೀಲ್ಡ್ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದಲ್ಲಿ ಟಾಸ್ ಸೋತು ಬ್ಯಾಟಿಂಗ್ ಆಹ್ವಾನ ಪಡೆದ ವೆಸ್ಟ್ ಇಂಡೀಸ್ ತಂಡ ಜಸ್ಟಿನ್ ಗ್ರೀವ್ಸ್ (101) ಶತಕದ ನೆರವಿನಿಂದ ನಿಗದಿತ 50 ಓವರ್‌ಗಳಲ್ಲಿ 7 ವಿಕೆಟ್‌ಗೆ 295 ರನ್ ಬಾರಿಸಿತು. ಇದಕ್ಕೆ ಉತ್ತರವಾಗಿ ಭಾರತ 41.4 ಓವರ್‌ಗಳಲ್ಲಿ ಕೇವಲ 2 ವಿಕೆಟ್ ಕಳೆದುಕೊಂಡು 300 ರನ್ ಬಾರಿಸಿ ಗೆಲುವು ದಾಖಲಿಸಿತು.

ವಿಂಡೀಸ್ ಮೊತ್ತ ಬೆನ್ನತ್ತಿದ ಭಾರತ ತಂಡದ ನಾಯಕ ಶುಭಮನ್ ಗಿಲ್ ಮತ್ತೊಮ್ಮೆ ಅದ್ಭುತ ಆಟ ಪ್ರದರ್ಶಿಸಿದರು. ರೋಹಿತ್ ಶರ್ಮಾ ಅವರೊಂದಿಗೆ ಮೊದಲ ವಿಕೆಟ್‌ಗೆ 74 ರನ್‌ಗಳ ಜೊತೆಯಾಟವನ್ನು ನಡೆಸಿ, ಆ ಬಳಿಕ ವಿರಾಟ್ ಕೊಹ್ಲಿ ಜತೆ ಎರಡನೇ ವಿಕೆಟ್‌ಗೆ 151 ರನ್ ಪೇರಿಸಿದರು. ಅವರು 108 ಎಸೆತಗಳಿಂದ 110 (13 ಬೌಂಡರಿ, 1 ಸಿಕ್ಸರ್) ರನ್ ಬಾರಿಸಿ ತಮ್ಮ 10ನೇ ಏಕದಿನ ಶತಕವನ್ನು ಪೂರೈಸಿದರು. ಜೇಡನ್ ಸೀಲ್ಸ್ ಅವರ ಬೌಲಿಂಗ್‌ನಲ್ಲಿ ಬೌಂಡರಿ ಬಾರಿಸುವ ಮೂಲಕ ಅವರು ಈ ಮೈಲಿಗಲ್ಲನ್ನು ತಲುಪಿದರು. ರೋಹಿತ್ ಶರ್ಮ 32 ರನ್ ಬಾರಿಸಿದರು.

ಇನ್ನೊಂದೆಡೆ 40 ಎಸೆತಗಳಲ್ಲಿ ಅರ್ಧಶತಕ ಪೂರೈಸಿದ ಕೊಹ್ಲಿ ಆ ಬಳಿಕ ಮತ್ತಷ್ಟು ಆಕ್ರಮಣಕಾರಿಯಾಗಿ ಆಡಿ 74 ಎಸೆತಗಳಲ್ಲಿ ಶತಕ ಪೂರೈಸಿದರು. ಸಿಕ್ಸರ್ ಮೂಲಕವೇ ಶತಕ ಬಾರಿಸಿ ಸಂಭ್ರಮಿಸಿದ ಕೊಹ್ಲಿ ಈ ಮೂಲಕ ಏಕದಿನ ಪಂದ್ಯಗಳಲ್ಲಿ ತಮ್ಮ 55ನೇ ಶತಕ ದಾಖಲಿಸಿದರು. ವೆಸ್ಟ್ ಇಂಡೀಸ್ ವಿರುದ್ಧ ಇದು ಅವರ 10ನೇ ಶತಕ. ಒಟ್ಟು 88 ಎಸೆತ ಎದುರಿಸಿದ ಕೊಹ್ಲಿ ಬರೋಬ್ಬರಿ 9 ಸಿಕ್ಸರ್ ಮತ್ತು 10 ಬೌಂಡರಿಗಳೊಂದಿಗೆ 139 ರನ್ ಬಾರಿಸಿ ಅಜೇಯರಾಗುಳಿದರು.

**ಜಸ್ಟಿನ್ ಗ್ರೀವ್ಸ್ ಶತಕ ವ್ಯರ್ಥ**

ಇದಕ್ಕೂ ಮೊದಲು ಬ್ಯಾಟಿಂಗ್ ನಡೆಸಿದ ವೆಸ್ಟ್ ಇಂಡೀಸ್‌ಗೆ ಆರಂಭಿಕ ಬ್ಯಾಟರ್ ನಾಯಕ ಜಸ್ಟಿನ್ ಗ್ರೀವ್ಸ್ ಶತಕ (101) ಬಾರಿಸಿ ಆಸರೆಯಾದರು. 20ನೇ ಓವರ್‌ನಲ್ಲಿ ಕುಲ್‌ದೀಪ್ ಯಾದವ್ ಕ್ಯಾಂಪ್‌ಬೆಲ್ (62) ಅವರ ವಿಕೆಟ್ ಕಿತ್ತು ಭಾರತಕ್ಕೆ ಆರಂಭಿಕ ಮುನ್ನಡೆ ತಂದುಕೊಟ್ಟರು. ಕುಲ್‌ದೀಪ್ ಯಾದವ್ ಈ ಪಂದ್ಯದಲ್ಲಿ ತಮ್ಮ ಸಾಮರ್ಥ್ಯ ಪ್ರದರ್ಶಿಸಿ ನಾಲ್ಕು ಪ್ರಮುಖ ವಿಕೆಟ್ ಕಿತ್ತರು.

## ಸಚಿನ್ ಸಮೀಪಕ್ಕೆ ಕೊಹ್ಲಿ

ತಮ್ಮ 55ನೇ ಶತಕ ದಾಖಲಿಸಿದ ವಿರಾಟ್ ಕೊಹ್ಲಿ ಏಕದಿನ ಅಂತರರಾಷ್ಟ್ರೀಯ ಕ್ರಿಕೆಟ್ ಇತಿಹಾಸದಲ್ಲಿ ಅತಿ ಹೆಚ್ಚು ರನ್ ಗಳಿಸಿದ ಎರಡನೇ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಸಾರ್ವಕಾಲಿಕ ಶ್ರೇಷ್ಠ ಬ್ಯಾಟ್ಸ್‌ಮನ್ ಸಚಿನ್ ತೆಂಡೂಲ್ಕರ್ (18,426 ರನ್) ನಂತರ ಈ ಮಾಂತ್ರಿಕ ಮೈಲಿಗಲ್ಲು ತಲುಪಿದ ವಿಶ್ವದ ಎರಡನೇ ಆಟಗಾರನಾಗಿ ಕೊಹ್ಲಿ ದಾಖಲೆ ಪುಟ ಸೇರಿದ್ದಾರೆ. ಸಚಿನ್ 377 ಇನ್ನಿಂಗ್ಸ್‌ಗಳಲ್ಲಿ 15,000 ಏಕದಿನ ರನ್‌ಗಳನ್ನು ತಲುಪಿದ್ದರೆ ಕೊಹ್ಲಿ ಕೇವಲ 303 ಇನ್ನಿಂಗ್ಸ್‌ಗಳಲ್ಲಿ ಈ ಸಾಧನೆ ಮಾಡಿದ್ದಾರೆ.

## ವಿರಾಟ್ ದಾಖಲೆ ಮುರಿದ ಗಿಲ್

ನಾಯಕ ಶುಭ್‌ಮನ್ ಗಿಲ್ ಕೇವಲ 66 ಇನಿಂಗ್ಸ್‌ಗಳಲ್ಲಿ 10ನೇ ಏಕದಿನ ಶತಕ ಪೂರೈಸುವ ಮೂಲಕ ವಿರಾಟ್ ಕೊಹ್ಲಿ ಅವರ ಅತಿ ವೇಗದ ಶತಕಗಳ ದಾಖಲೆಯನ್ನು ಗಿಲ್ ಮುರಿದಿದ್ದಾರೆ. ಈ ಸಾಧನೆಯೊಂದಿಗೆ ಅವರು ವಿಶ್ವದ 3ನೇ ಅತ್ಯಂತ ವೇಗದ ಆಟಗಾರ ಎಂಬ ಕೀರ್ತಿಗೆ ಭಾಜನರಾಗಿದ್ದಾರೆ.

# ಕಿಸ್‌ಮಿ ಅಂದ ಅಭಯ್




ಲವ್‌ಮಿ ಆರ್ ಹೇಟ್ ಮಿ... ಕಿಸ್‌ಮಿ ಆರ್ ಕಿಲ್‌ಮಿ.. ಶಂಕರ್ ಗುರು ಚಿತ್ರದ ಈ ಹಾಡು ಇದಂದಿಗೂ ಜನಪ್ರಿಯ ಗೀತೆಯಾಗಿದೆ. ಈ ಹಾಡಿನ ಸಾಲಿನ ಕಿಸ್‌ಮಿ ಶೀರ್ಷಿಕೆಯಲ್ಲಿ ಸಿನಿಮಾ ಮೂಡಿ ಬರುತ್ತಿದೆ. ಉಡುಪಿಯ ಶಂಭು ಶೈಲೇಶ್ವರ ದೇವಸ್ಥಾನದಲ್ಲಿ ಚಿತ್ರದ ಮುಹೂರ್ತ ನೆರವೇರಿತು.



ಅಂತಾರಾಷ್ಟ್ರೀಯ ಬಾಡಿ ಬಿಲ್ಡರ್ ವಾಲೆಂಟೈನ್ ಡಿಸೋಜ ಕ್ಲಾಪ್ ಮಾಡಿ ಚಿತ್ರತಂಡಕ್ಕೆ ಶುಭ ಹಾರೈಸಿದರು. ನಂದಿ ಫಿಲಂಸ್ ಬ್ಯಾನರ್‌ನಲ್ಲಿ ಎಂ.ಶಂಕರ್ ಪ್ರಭು, ಎಂ.ಸಿ.ಎಂ.ಆರಾಧ್ಯ, ರಾಮು ಮತ್ತು ಹಿರಿಯ ವಿತರಕ ರಾಮಚಂದ್ರ ಕುಲಕರ್ಣಿ ಜಂಟಿಯಾಗಿ ಬಂಡವಾಳ ಹೂಡುತ್ತಿದ್ದಾರೆ. ರವಿಬಾಸರ ಚಿತ್ರಕ್ಕೆ ಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಪ್ರೀತಿಯಿಂದ ಮಾಡಿದ ಹಾರೈಕೆ ಎಂಬ ಅಡಿಬರಹ ಈ ಚಿತ್ರಕ್ಕಿದೆ. ಕಿಸ್‌ಮಿ, ಅಂದಾಕ್ಷಣ ಇದು ಲವ್ ಅಂದು ಕೊಳ್ಳಬಹುದು. ಆದರೆ ಕಿಸ್‌ಮಿಗೆ ಹಲವು ಭಾವನೆಗಳು ಬರುತ್ತದೆ. ತಾಯಿ ಮಗನಿಗೆ ಕೊಡೋ ಮುದ್ದಿನ ಕಿಸ್, ಹುಡುಗ ಹುಡುಗಿಯನ್ನು ಅಪ್ಪಿಕೊಂಡು ಕೊಡುವ ಖುಷಿಯ ಕಿಸ್, ಅಜ್ಜ ಮೊಮ್ಮಗನಿಗೆ ಹರಸುತ್ತಾ ಕೊಡುವ ಅಭಿಮಾನದ ಕಿಸ್. ಬದುಕಲ್ಲಿ ಯಾವ ಕಿಸ್ ಮಹತ್ವ ಅನ್ನುವದನ್ನು ಸಿನಿಮಾದಲ್ಲಿ ಹೇಳುವ ಪ್ರಯತ್ನ ಮಾಡಲಾಗಿದೆ ಎಂದು ನಿರ್ದೇಶಕ ರವಿ ಬಾಸರ ಹೇಳಿದರು.

ಅಭಯ್ ವೀರ್ ನಾಯಕನಾಗಿ ನಟಿಸಿದ್ದು, ವೃತ್ತಿಯಲ್ಲಿ ವೈದ್ಯೆಯಾಗಿರುವ ಡಾ.ರಾಧನಾ ಆನಂದ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಸಂದೀಪ್ ಶೆಟ್ಟಿಗಾರ್, ಯು. ಕೆ.ಭಾಸ್ಕರ್ ಮುಂತಾದವರು ತಾರಾಗಣದಲ್ಲಿದ್ದಾರೆ. ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು, ಕೌಶಿಕ್ ಕೃಷ್ಣ ಸಂಗೀತ ಸಂಯೋಜಿಸುತ್ತಿದ್ದಾರೆ. ಬಾಲಗಣೇಶನ್ ಛಾಯಾಗ್ರಹಣ, ಲಕ್ಕಿ ಸಂಕಲನ, ಈ ಚಿತ್ರಕ್ಕಿದೆ. ಉಡುಪಿ ಹಾಗೂ ಕೊಡಗಿನ ಸುತ್ತಮುತ್ತ ಸುಮಾರು ಹದಿನೈದು ದಿನಗಳ ಕಾಲ ಒಂದೇ ಹಂತದಲ್ಲಿ ಚಿತ್ರೀಕರಣ ನಡೆಸಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ.

# ಕಲ್ಟ್ ಕಥೆಯ ಲಾರ್ಡ್ ಗಾಗ




ಕನ್ನಡದಲ್ಲಿ ಕೆಲವು ಸಿನಿಮಾಗಳು ಸ್ಟಾರ್ ನಟರು, ಬಿಗ್ ಬಜೆಟ್ ಮೂಲಕ ಗಮನ ಸೆಳೆದರೆ, ಇನ್ನು ಕೆಲವು ಸಿನಿಮಾಗಳು ತಮ್ಮ ಟೈಟಲ್, ಕಂಟೆಂಟ್ ಮೂಲಕವೇ ಗಮನ ಸೆಳೆಯುವಲ್ಲಿ ಯಶಸ್ವಿಯಾಗುತ್ತಿವೆ. ಅಂತಹ ಸಿನಿಮಾಗಳಲ್ಲಿ ಲಾರ್ಡ್ ಗಾಗ ಚಿತ್ರವೂ ಒಂದು.

ಈಗಾಗಲೇ ಸದ್ದಿಲ್ಲದೆ ತನ್ನ ಬಹುತೇಕ ಚಿತ್ರೀಕರಣ ಪೂರ್ಣಗೊಳಿಸಿರುವ ಲಾರ್ಡ್ ಗಾಗ ಚಿತ್ರತಂಡ, ಇದೀಗ ಟೈಟಲ್ ಬಿಡುಗಡೆ ಮಾಡಿದೆ. ಈ ಚಿತ್ರಕ್ಕೆ ನಿರ್ದೇಶಕ ವೈಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಝೀರೋ ಗ್ರಾ ್ಯವಿಟಿ ಫಿಲಂಸ್ ಬ್ಯಾನರಿನಲ್ಲಿ ನಿರ್ಮಾಣವಾಗುತ್ತಿರುವ ಈ ಚಿತ್ರವನ್ನು ಉದ್ಯಮಿ ಮುಕಿ ರಘುನಾಥ್‌ನ್ ನಿರ್ಮಿಸುತ್ತಿದ್ದಾರೆ.

ಲಾರ್ಡ್ ಗಾಗ ಕಲ್ಟ್ ಕಥೆಯ ಸಿನಿಮಾವಾಗಿದ್ದು, ಮನುಷ್ಯನ ಮನಸ್ಸಿನಲ್ಲಿ ಮೂಡುವ ಪ್ರೀತಿ, ಪ್ರೇಮ, ಪ್ರಣಯ, ಭಾವನೆ, ವ್ಯಸನ, ಆಯ್ಕೆ ಎಲ್ಲದರ ಚಿತ್ರಣ ಈ ಚಿತ್ರದಲ್ಲಿದೆ. ರೊಮ್ಯಾಂಟಿಕ್ ಸೈಕಾಲಜಿಕಲ್ ಥ್ರಿಲ್ಲರ್ ಶೈಲಿಯಲ್ಲಿ ಕಥೆ ಸಾಗಲಿದೆ. ಲಾರ್ಡ್ ಗಾಗ ಚಿತ್ರದಲ್ಲಿ ಶೂನ್ಯ ನಾಯಕ ನಟನಾಗಿ ಅಭಿನಯಿಸಿದ್ದಾರೆ. ಈ ಚಿತ್ರ ಕನ್ನಡದ ಜತೆಗೆ ತಮಿಳು, ತೆಲುಗು, ಮಲೆಯಾಳಂ, ಹಿಂದಿ, ಬೆಂಗಾಲಿ, ಭೋಜಪುರಿ ಸೇರಿದಂತೆ ಏಕಕಾಲಕ್ಕೆ ಏಳಕ್ಕೂ ಹೆಚ್ಚು ಭಾಷೆಗಳಲ್ಲಿ ತೆರೆಗೆ ಬರಲಿದೆ. ಸದ್ಯ ಚಿತ್ರದ ಟೈಟಲ್ ಮತ್ತು ಕಥಾಹಂದರದ ಎಳೆಯನ್ನು ಅಷ್ಟೇ ಬಿಟ್ಟುಕೊಟ್ಟಿರುವ ಚಿತ್ರತಂಡ ಶೀಘ್ರದಲ್ಲಿಯೇ ಬಿಡುಗಡೆಯ ದಿನಾಂಕ ಘೋಷಿಸಲಿದೆ.



# ಕಿರುತೆರೆಯಲ್ಲಿ ಜಗದ್ಧಾತ್ರಿ



ಬಿಗ್‌ಬಾಸ್ ಖ್ಯಾತಿಯ ಮೋಕ್ಷಿತಾ ಪೈ ಮತ್ತೆ ಕಿರುತೆರೆಗೆ ಮರಳಿದ್ದು, ಜಗದ್ಧಾತ್ರಿ ಧಾರಾವಾಹಿಯಲ್ಲಿ ಅಭಿನಯಿಸುತ್ತಿದ್ದಾರೆ. ಮೋಕ್ಷಿತಾ ಈ ಬಾರಿ ಖಾಕಿ ತೊಟ್ಟು ಮಿಂಚಲಿದ್ದಾರೆ. ಜತೆಗೆ ತುಂಬು ಕುಟುಂಬದ ಮುದ್ದಿನ ಮಗಳಾಗಿಯೂ ನಟಿಸುತ್ತಿದ್ದು, ಹೀಗೆ ಅವರ ಪಾತ್ರ ಡಬಲ್ ಶೇಡ್‌ನಲ್ಲಿ ಸಾಗಲಿದೆ. ಮಹಿಳಾ ಪೊಲೀಸ್ ಕಥೆಯನ್ನು ಹೊತ್ತ ಜಗದ್ಧಾತ್ರಿ ಕಿರುತೆರೆಯಲ್ಲಿ ಪ್ರಸಾರ ಆರಂಭಿಸಿದೆ.

ಕುಟುಂಬದಲ್ಲಿದ್ದುಕೊಂಡೆ ಹೊರಜಗತ್ತಿನಲ್ಲಿ ನಡೆಯುವ ಅಪರಾಧಗಳನ್ನು ಹತ್ತಿಕ್ಕುವ ಪೊಲೀಸ್ ಅಧಿಕಾರಿಯ ರೂಪದಲ್ಲಿ ಮೋಕ್ಷಿತಾ ಪೈ ಜಗದ್ಧಾತ್ರಿ ಪಾತ್ರಕ್ಕೆ ಜೀವ ತುಂಬಿದ್ದಾರೆ. ಜಗದ್ಧಾತ್ರಿಯ ಅಮ್ಮ ಅಪ್ಪಟ ದೇಶಭಕ್ತೆ ಆದರೂ ಅವರ ಮೇಲೆ ದೇಶದ್ರೋಹದ ಆರೋಪ ಹೊರಿಸಲಾಗಿರುತ್ತದೆ. ಅದನ್ನು ತೊಡೆದು ಜಗದ್ಧಾತ್ರಿ ಏನೆಲ್ಲ ಮಾಡುತ್ತಾಳೆ ಎನ್ನುವುದರ ಸುತ್ತ ಕಥೆ ಹೆಣೆಯಲಾಗಿದೆ. ಮನೆಯವರ ಕಟು ಮಾತುಗಳನ್ನೂ ಸಹಿಸಿ ತಾಯಿಗೆ ನ್ಯಾಯ ಒದಗಿಸುವ ಜಗದ್ಧಾತ್ರಿಯ ಪಾತ್ರ ಸುಂದರವಾಗಿ ಮೂಡಿಬರಲಿದೆ. ನಟ ವಿಜಯ್ ಸೂರ್ಯ, ಕವಿತಾ ಗೌಡ ಕೂಡ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಗಿರಿಜಾ ಲೋಕೇಶ್, ಅರುಣಾ ಬಾಲರಾಜ್, ಲಕ್ಷ್ಮೀ ಸಿದ್ದಯ್ಯ, ಮೈಕೋ ಮಂಜು, ವಚನ್ ಹೊಸಮತ, ರವಿ ಭಟ್, ಮಾನಸಿ ಸುಧೀರ್ ಸೇರಿದಂತೆ ದೊಡ್ಡ ಕಲಾವಿದರ ಬಳಗವೇ ಈ ಧಾರಾವಾಹಿಯಲ್ಲಿದೆ.

ಕೀರ್ತಿ ಅಕ್ಷಯ ನೆಟ್‌ವರ್ಕ್ ಬ್ಯಾನರ್‌ನಲ್ಲಿ ಮಹೇಶ್‌ರಾವ್ ಹಾಗೂ ಪ್ರಕಾಶ್ ಒಟ್ಟಾಗಿ ಈ ಧಾರಾವಾಹಿಯನ್ನು ನಿರ್ಮಾಣ ಮಾಡುತ್ತಿದ್ದು, ಮಹೇಶ್ ಸಾರಂಗ್ ನಿರ್ದೇಶನದಲ್ಲಿ ಜಗದ್ಧಾತ್ರಿ ಮೂಡಿಬರುತ್ತಿದೆ. ಕೌಟುಂಬಿಕ ಕಥಾಹಂದರದ ಜತೆಗೆ ಭರ್ಜರಿ ಸಾಹಸ ಸನ್ನಿವೇಶಗಳು ಪ್ರೇಕ್ಷಕರನ್ನು ರಂಜಿಸಲಿವೆ. ಜಗದ್ಧಾತ್ರಿ ಸೋಮವಾರದಿಂದ ಜೀ ವಾಹಿನಿಯಲ್ಲಿ ಪ್ರಸಾರವಾಗಲಿದೆ.



# ಮರಳಿಬಂದ ಕಾರ್ತಿಕೇಯ




ತೆಲುಗು ನಟ ಕಾರ್ತಿಕೇಯ ಗುಮ್ಮಕೊಂಡ ತಮ್ಮ ಹೊಸ ಚಿತ್ರ ಕಮ್‌ಬ್ಯಾಕ್ ಮೂಲಕ ಪ್ರೇಕ್ಷಕರ ಮುಂದೆ ಬರುತ್ತಿದ್ದಾರೆ. ತಮ್ಮ ಹುಟ್ಟುಹಬ್ಬದ ಅಂಗವಾಗಿ ವಿಶೇಷ ಗ್ಲಿಂಪ್ಸ್ ಬಿಡುಗಡೆ ಮಾಡುವ ಮೂಲಕ ಅಧಿಕೃತವಾಗಿ ಹೊಸ ಸಿನಿಮಾ ಘೋಷಿಸಿದ್ದಾರೆ. ಈ ಚಿತ್ರದಲ್ಲಿ ಕಾರ್ತಿಕೇಯ ನಾಯಕನಾಗಿ ನಟಿಸುವ ಜತೆಗೆ ನಿರ್ದೇಶನದ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ಚಿತ್ರರಂಗದಿಂದ ಕೆಲಕಾಲ ದೂರವಿದ್ದ ನಂತರ ನಿರ್ದೇಶಕರಾಗಿ ಅವರು ಕಮ್‌ಬ್ಯಾಕ್ ಮಾಡಿರುವುದು ಸಿನಿಮಾದ ಮೇಲಿನ ನಿರೀಕ್ಷೆಯನ್ನು ಮತ್ತಷ್ಟು ಹೆಚ್ಚಿಸಿದೆ. ಮೂರು ವರ್ಷಗಳಿಂದ ಯಾವುದೇ ಸದ್ದಿಲ್ಲದೆ ಕಣ್ಮರೆಯಾಗಿರುವ ಬಾಕ್ಸರ್ ಒಬ್ಬನ ಸುತ್ತ ಚಿತ್ರದ ಕಥೆ ಸಾಗುತ್ತದೆ. ಗ್ಲಿಂಪ್ಸ್‌ನಲ್ಲಿನಲ್ಲಿ ತಿಳಿಯುತ್ತದೆ. ಬಾಕ್ಸರ್ ಒಬ್ಬನ ಸುತ್ತ ಸಾಗುವ ಈ ಸಿನಿಮಾದಲ್ಲಿ ಕಾರ್ತಿಕೇಯ ಬಾಕ್ಸರ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಕೇವಲ ಆಡಂಬರದ ಅಬ್ಬರಕ್ಕಿಂತ ಹೆಚ್ಚಾಗಿ, ನೈಜತೆ ಹಾಗೂ ವೈಯಕ್ತಿಕ ಹೋರಾಟಕ್ಕೆ ಒತ್ತು ನೀಡುವ ಬಾಕ್ಸಿಂಗ್ ಚಿತ್ರ ಇದಾಗಿರಲಿದೆ ಎಂಬ ಭರವಸೆಯೂ ಇದೆ. ಬಾಕ್ಸಿಂಗ್ ತರಬೇತಿಯ ದೃಶ್ಯಗಳು ನೈಜವಾಗಿದ್ದು, ಮತ್ತೆ ಕಣಕ್ಕಿಳಿಯಲು ತೆರಬೇಕಾದ ಮಾನಸಿಕ ಮತ್ತು ದೈಹಿಕ ಶ್ರಮವನ್ನು ಸವಾಲಿನ ರೂಪದಲ್ಲಿ ತೆರೆದಿಡಲಿವೆ. ಕಾರ್ತಿಕೇಯ ಅವರ ಅತ್ಯುತ್ತಮ ಫಿಟ್ನೆಸ್ ಹಿನ್ನೆಲೆಯು ಈ ಹೋರಾಟದ ದೃಶ್ಯಗಳಿಗೆ ಜೀವ ತುಂಬಲಿವೆ. ಕಾರ್ತಿಕೇಯ ಕ್ರಿಯೇಟಿವ್ ವರ್ಕ್ಸ್ ಬ್ಯಾನರ್‌ನಲ್ಲಿ ಚಿತ್ರ ನಿರ್ಮಾಣವಾಗುತ್ತಿದ್ದು, ಕಾರ್ತಿಕೇಯ ಅವರ ಪತ್ನಿ ಲೋಹಿತಾ ರೆಡ್ಡಿ ನಿರ್ಮಾಣದ ಜವಾಬ್ದಾರಿ ವಹಿಸಿಕೊಂಡಿದ್ದಾರೆ. ವಿಜಯ್ ಬುಲ್ಗಾನಿನ್ ಸಂಗೀತ ನಿರ್ದೇಶನ, ಕಲ್ಯಾಣ್ ಸೂರ್ಯಪ್ರಕಾಶ್ ಸಂಕಲನ, ಜಗದೀಶ್ ಚೀಕಟಿ ಈ ಚಿತ್ರಕ್ಕಿದೆ. ಮುಂದಿನ ವರ್ಷ ಈ ಚಿತ್ರ ತೆರೆಗೆ ಬರಲಿದೆ.

# ಸುಮಾ ಇದು ನಮ್ಮ ನಡುವಿನ ಕಥೆ



ಮಹಿಳಾ ಪ್ರಧಾನ ಕಥಾಹಂದರ ಹೊಂದಿರುವ ಸುಮಾ ಸಿನಿಮಾದ ಟ್ರೇಲರ್ ಬಿಡುಗಡೆಯಾಗಿದೆ. ಸುಮಾ ಚಿತ್ರತಂಡ ತಮ್ಮ ಚಿತ್ರದ ಟ್ರೇಲರ್ ಅನ್ನು ನಿರಾ ಶ್ರೀತರು ಮತ್ತು ಬಡವರ ಕೈಯಲ್ಲಿ ಬಿಡುಗಡೆ ಮಾಡಿಸಿ ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಿದೆ. ಈ ಹಿಂದೆ ಶ್ರೀಕಬ್ಬಾಳಮ್ಮನ ಮಹಿಮೆ, ಮನೆ, ಬ್ಯಾಂಕ್ ಲೋನ್ ಸೇರಿದಂತೆ ಹಲವು ಸಿನಿಮಾಗಳನ್ನು ನಿರ್ದೇಶಿಸಿ ಪ್ರಸಿದ್ಧಿ ಪಡೆದಿರುವ ಸಾಯಿ ರಶ್ಮಿ, ಈಗ ಸುಮಾ ಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ. ಪ್ರದೀಪ್ ಗೌಡ ನಾಯಕನಾಗಿ ಅಭಿನಯಿಸಿದ್ದು, ಉಳಿದಂತೆ ರೇಣು ಶಿಕಾರಿ, ಡಿ.ಆರ್. ಮುರಳೀಧರ್, ಕಾವ್ಯಾ ಪ್ರಕಾಶ್, ರೋಹಿಣಿ, ಸುನಂದ ಕಲಬುರ್ಗಿ, ರೇಣುಕುಮಾರ್ ಸಂಸ್ಥಾನ ಮಠ, ಅವಿನಾಶ್ ಗಂಜೀಹಾಳ, ಶಿವಕುಮಾರ್ ಆರಾಧ್ಯ , ಬಿ.ಪಿ.ಹರಿಹರನ್ ಮುಂತಾದವರು ಚಿತ್ರದಲ್ಲಿ ಅಭಿನಯಿಸಿದ್ದಾರೆ.

ಓಂ ಸಾಯಿ ಸಿನೆಮಾಸ್ ಬ್ಯಾನರಿನಲ್ಲಿ ಚಿತ್ರ ನಿರ್ಮಾಣವಾಗಿದೆ. ಮಂಡ್ಯ, ಮದ್ದೂರು, ಆಲಭುಜನಹಳ್ಳಿ, ಕೆ. ಎಂ ದೊಡ್ಡಿ, ನಗರಕೆರೆ ಸುತ್ತಮುತ್ತ ಸಿನಿಮಾದ ಚಿತ್ರೀಕರಣ ನಡೆಸಲಾಗಿದೆ. ಸುಮಾ ಅಕ್ಟೋಬರ್ 2 ರಂದು ರಾಜ್ಯಾದ್ಯಂತ ತೆರೆಗೆ ಬರಲಿದೆ.

> ಇದೊಂದು ಮಹಿಳಾ ಪ್ರಧಾನ ಕಥಾಹಂದರದ ಸಿನಿಮಾ. ಸುಮಾ ಎಂದರೆ ಸಂಪೂರ್ಣ ಮೊಗ್ಗು ಅಲ್ಲದ, ಸಂಪೂರ್ಣ ಅರಳಿಯೂ ಇರದಂತಹ ಹೂವು. ಈ ಸಿನಿಮಾದ ನಾಯಕಿಯ ಪಾತ್ರ ಕೂಡ ಹಾಗೇ ಇರುವಂಥದ್ದು. ನಮ್ಮ ನಡುವೆಯೇ ಇರುವಂಥ ಹುಡುಗಿಯೊಬ್ಬಳ ಅಂತರಂಗದ ಕಥೆ ಈ ಸಿನಿಮಾದಲ್ಲಿದೆ. ಇದು ಜನಸಾಮಾನ್ಯರ ಕಥೆಯಾಗಿದೆ.
>
> - ಸಾಯಿ ರಶ್ಮಿ ನಿರ್ದೇಶಕಿ